ಇ) ಈ ನಿಟ್ಟಿನಲ್ಲಿ ಕೃಷಿ ವಿಶ್ವವಿದ್ಯಾಲಯಗಳ ಕಾರ್ಯಕ್ರಮಗಳೇನು?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)

ಅ) ರಾಜ್ಯದಲ್ಲಿರುವ ಎರಡು ಕೃಷಿ ವಿಶ್ವವಿದ್ಯಾನಿಲಯಗಳ ಮೂಲಕ ರಾಜ್ಯಕ್ಕೆ ಬೇಕಾಗಿರುವ ಪ್ರಮುಖ ಬೆಳೆಗಳ ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡುವುದು, ಬೀಜ ತಂತ್ರಜ್ಞಾನದ ಬಗ್ಗೆ ಸಂಶೋಧನೆ ಹಾಗೂ ತರಬೇತಿ, ಬಿಡುಗಡೆ ಮಾಡಿದ ತಳಿಗಸ ತಳಿವರ್ಧಕ / ಮೂಲ / ಪ್ರಮಾಣಿತ ಬೀಜಗಳನ್ನು ಉತ್ಪಾದಿಸಿ ಸರಬರಾಜು ಮಾಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಆ) ಹೌದು.

ಇ) ರಾಜ್ಯದಲ್ಲಿರುವ ಎರಡು ಕೃಷಿ ವಿಶ್ವವಿದ್ಯಾನಿಲಯಗಳು ತಳಿಗಳನ್ನು ಅಭಿವೃದ್ಧಿಪಡಿಸಿ ಬಿಡುಗಡೆ ಮಾಡುವುದು ತಳಿಗಳ ವರ್ಧಕ ಬೀಜಗಳನ್ನು ಉತ್ಪಾದಿಸುವುದು. ಬೀಜೋತ್ಪಾದನೆ ಬಗ್ಗೆ ಅನುಸರಿಸಬೇಕಾದ ಹೊಸ ತಂತ್ರಜ್ಞಾನಗಳು ಮತ್ತು ಬೀಜ ಸಂಸ್ಕರಣೆ, ದಾಸ್ತಾನು ಮಾಡುವ ಬಗ್ಗೆ ಸಂಶೋಧನೆ ಹಾಗೂ ತಳಿಗಳನ್ನು ಗುರುತಿಸಲು ಹೊಸ ತಂತ್ರಜ್ಞಾನವಾದ ಅನುವಂಶಿಕತೆಯ ಮೂಲವಾದ DNA ಫಿಂಗರ್ ಪ್ರಿಂಟಿಂಗ್ ಬಗ್ಗೆ ಸಂಶೋಧನೆ, ಕೃಷಿ ಇಲಾಖೆಯ ಅಧಿಕಾರಿಗಳು ಹಾಗೂ ರೈತರಿಗೆ ಬೀಜ ತಂತ್ರಜ್ಞಾನದ ಬಗ್ಗೆ ತರಬೇತಿ, ಬೀಜ ತಂತ್ರಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಮೂಲ / ಪ್ರಮಾಣಿತ / ಗುಣಮಟ್ಟದ ಬೀಜೋತ್ಪಾದನೆ ಕೈಗೊಳ್ಳುವುದು ಇತ್ಯಾದಿ ಬೀಜ ತಂತ್ರಜ್ಞಾನದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಕೃಷಿ ವಿಶ್ವವಿದ್ಯಾನಿಲಯಗಳು ನಿರ್ವಹಿಸುತ್ತಿವೆ.

557(705) ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಮಹಿಳಾ ಅಭಿವೃದ್ಧಿಗಾಗಿ ಯಾವ ಯಾವ ಯೋಜನೆಗಳನ್ನು ಜಾರಿಗೆ ತರಲಾಗಿದೆ? ಯೋಜನಾವಾರು ವಿವರಗಳನ್ನು ನೀಡುವುದು);

ಆ) ರಾಜ್ಯದ ಯಾವಾವ ಜಿಲ್ಲೆಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆಯಾಗಿರುವುದು ಕಂಡು ಬಂದಿದೆ? ಕಂಡುಬಂದಿರುವ ಜಿಲ್ಲೆಗಳಾವುವು?

ಇ) ಈ ಸಂಖ್ಯಾ ಕ್ಷೀಣತೆಗೆ ಕಾರಣವೇನು?

ಶ್ರೀಮತಿ ಭಾಗೀರಥಿ ಮರಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವರು)

ಅ) **ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**

ರಾಜ್ಯದಲ್ಲಿ ಈ ಕೆಳಕಂಡ ಯೋಜನೆಗಳನ್ನು ಮಹಿಳಾ ಅಭಿವೃದ್ಧಿಗಾಗಿ ಜಾರಿಗೊಳಿಸಲಾಗುತ್ತಿದೆ;

1) ಸ್ತ್ರೀಶಕ್ತಿ, 2) ಸಾಂತ್ವನ 3) ಗ್ರಾಮಾಂತರ ಪ್ರದೇಶದ ಹೆಣ್ಣುಮಕ್ಕಳಿಗಾಗಿ ಹಾಜರಾತಿ ಶಿಷ್ಯವೇತನ, 4. ಹೆಣ್ಣು ಮಕ್ಕಳ ವಸತಿ ನಿಲಯ, 5) ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ, 6) ಉದ್ಯೋಗಸ್ಥ ಮಹಿಳೆಯರಿಗೆ ವಸತಿ ಕಟ್ಟಡ ನಿರ್ಮಾಣ, 7) ವಿಧವಾ ವೇತನ 8) ಕರ್ನಾಟಕ ಮಹಿಳಾ ಅಭಿವೃದ್ಧಿ ಯೋಜನೆಯಡಿ ರಾಜ್ಯದ 25 ಇಲಾಖೆಗಳಲ್ಲಿ ಮೂರನೆ ಒಂದು ಭಾಗದಷ್ಟು ಫಲಾನುಭವಿ ಆಧಾರಿತ ಕಾರ್ಯಕ್ರಮಗಳನ್ನು ಮಹಿಳೆಯರಿಗೆ ಒದಗಿಸುವುದು.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ:

1) ಉದ್ಯೋಗಿನಿ: ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ವ್ಯಾಪಾರ / ಕಿರು ಉದ್ದಿಮೆಯ ಚಟುವಟಿಕೆಗಳಲ್ಲಿ ತೊಡಗಲು ನಿಗಮದ ಸಹಾಯಧನದೊಂದಿಗೆ ಬ್ಯಾಂಕುಗಳ ಮೂಲಕ ಸಾಲ ಒದಗಿಸುವ ಯೋಜನೆ.

2) ಮಾರುಕಟ್ಟೆ ಯೋಜನೆ: ಮಹಿಳಾ ಉದ್ದಿಮೆದಾರರು ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆ ಒದಗಿಸಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳನ್ನು ಏರ್ಪಡಿಸುವ ಯೋಜನೆ.

3) ರಾಜ್ಯ ಸಂಪನ್ಮೂಲ ಕೇಂದ್ರ ಯೋಜನೆ:

ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಉಚಿತ ಸಲಹೆ ಮತ್ತು ಮಾರ್ಗದರ್ಶನ ನೀಡುವುದು, ಬೆಂಗಳೂರಿನ ನಿಗಮದ ಕಛೇರಿಯಲ್ಲಿ, ಬೆಳಗಾವಿ ಮತ್ತು ಮಂಗಳೂರಿನಲ್ಲಿ ಲಿಂಗ ತಾರತಮ್ಯದ ಬಗ್ಗೆ ಕಾರ್ಯಾಗಾರ/ ಬೀದಿ ನಾಟಕ ಏರ್ಪಡಿಸುವುದು.

4) ಮಹಿಳಾ ತರಬೇತಿ ಯೋಜನೆ : ವಿವಿಧ ಕೌಶಲ್ಯ ಅಭಿವೃದ್ಧಿ / ವೃತ್ತಿಪರ ತರಬೇತಿಗಳನ್ನು ಉಚಿತವಾಗಿ ಮಹಿಳೆಯರಿಗೆ ನೀಡಿ, ಉದ್ಯೋಗ / ಸ್ವಯಂ ಉದ್ಯೋಗಗಳಲ್ಲಿ ತೊಡಗಿಸಿ ಸ್ವಾವಲಂಬಿಗಳನ್ನಾಗಿಸುವ ಯೋಜನೆ.

5) ನಗರ ಸ್ತ್ರೀಶಕ್ತಿ ಯೋಜನೆ : ಸಣ್ಣ ವ್ಯಾಪಾರ ಮಾಡುತ್ತಿರುವ / ವ್ಯಾಪಾರ ಮಾಡಲು ಇಚ್ಛಿಸುವ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದ ಮಹಿಳೆಯರು/ ಅಂಗವಿಕಲ ಮಹಿಳೆಯರನ್ನೊಳಗೊಂಡಂತೆ ಸ್ವಸಹಾಯ ಗುಂಪುಗಳನ್ನು ರಚಿಸಿ, ನಂತರ ಅವುಗಳಿಗೆ ನಿಗಮದಿಂದ ಸುತ್ತುನಿಧಿ ನೀಡಿ, ಸದರಿ ಹಣವನ್ನು ಗುಂಪುಗಳ ಸದಸ್ಯರು ಗುಂಪಿನಿಂದ ಸಾಲ ಪಡೆದು ಸಣ್ಣ ವ್ಯಾಪಾರ ಮಾಡುವ ಯೋಜನೆ.

6) ದೇವದಾಸಿ ಪುನರ್ವಸತಿ ಯೋಜನೆ : ಕರ್ನಾಟಕ ದೇವದಾಸಿಯರ (ಸಮರ್ಪಣಾ ನಿಷೇಧ) ಕಾಯ್ದೆ 1982ರನ್ವಯ ದೇವದಾಸಿ ಪದ್ಧತಿಯಂತಹ ಸಾಮಜಿಕ ಕಳಂಕವನ್ನು ನಿರ್ಮೂಲನೆ ಮಾಡಲು ದೇವದಾಸಿ ಮಹಿಳೆಯರಿಗೆ ಅರಿವು ಜಾಗೃತಿ ಶಿಬಿರ, ಜಾತ್ರಾ ಜಾಗೃತಿ ಶಿಬಿರ, ಆರೋಗ್ಯ ಶಿಬಿರ ಮತ್ತು ಸ್ವಸಹಾಯ ಗುಂಪು ರಚನೆ ಕಾರ್ಯಕ್ರಮಗಳನ್ನು ಏರ್ಪಡಿಸಿ, ಆದಾಯ ಉನ್ನತಕರ

ಚಟುವಟಿಕೆಗಳಿಗಾಗಿ ನಿಗಮದಿಂದ 60% ಸಹಾಯಧನ ಹಾಗೂ ಬ್ಯಾಂಕುಗಳಿಂದ 40% ಸಾಲ ಒದಗಿಸಿ ಪುನವಸತಿ ಕಲ್ಪಿಸುವ ಯೋಜನೆ.

ಕೇಂದ್ರ ಸರ್ಕಾರದ ಯೋಜನೆಗಳು:

7) **ನೋರಾಡ್ ಯೋಜನೆ :** ಈ ಯೋಜನೆಯಡಿ ಕೇಂದ್ರ ಸರ್ಕಾರ ಗುರುತಿಸಿರುವ ಚಟುವಟಿಕೆಗಳಲ್ಲಿ ಅರ್ಹ ಮಹಿಳೆಯರಿಗೆ ಸರ್ಕಾರಿ ಸರ್ಕಾರೇತರ ಸಂಸ್ಥೆಗಳ ಮೂಲಕ ವಿವಿಧ ಚಟುವಟಿಕೆಗಳಲ್ಲಿ ತರಬೇತಿ ನೀಡಲು ಅನುದಾನ ನೀಡುವ ಯೋಜನೆ.

8) **ಸ್ಟೆಪ್ ಯೋಜನೆ:** ಕೃಷಿ ಹೈನುಗಾರಿಕೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ, ಕೈಮಗ್ಗ, ಕರಕುಶಲ ಕ್ಷೇತ್ರಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಮಹಿಳೆಯರಿಗೆ ತರಬೇತಿ ಮತ್ತು ಉತ್ಪದನಾ ಘಟಕ ಸ್ಥಾಪಿಸುವುದು, ಸರ್ಕಾರಿ / ಸರ್ಕಾರೇತರ ಸಂಸ್ಥೆಗಳ, ಸಾರ್ವಜನಿಕ ಉದ್ದಿಮೆಗಳ ಮೂಲಕ ಯೋಜನೆಯನ್ನು ಅನುಷ್ಠಾನ ಮಾಡಲಾಗುವುದು.

9) **ಸ್ವಶಕ್ತಿ ಯೋಜನೆ :** ಇದು ವಿಶ್ವ ಬ್ಯಾಂಕ್ ಆರ್ಥಿಕ ನೆರವಿನ ಯೋಜನೆ. ರಾಜ್ಯದ ಏಳು ಜಿಲ್ಲೆಗಳಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಅತಿ ಬಡತನದಲ್ಲಿರುವ ಮಹಿಳೆಯರನ್ನು ಸ್ವಶಕ್ತರನ್ನಾಗಿಸುವ ಯೋಜನೆ.

2. ರಾಜ್ಯದಲ್ಲಿ 6 ವರ್ಷದೊಳಗಿನ ಹೆಣ್ಣುಮಕ್ಕಳ ಜನನದ ಅನುಪಾತ 1991ರಲ್ಲಿ 960 ಇದ್ದು, 2001ರ ಜನ ಗಣತಿಯಂತೆ ಜನನದ ಅನುಪಾತ 949ಕ್ಕೆ ಇಳಿದಿರುತ್ತದೆ. ಇದರಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಿರುವ ಜಿಲ್ಲೆಗಳ ವಿವರ ಕೆಳಕಂಡಂತೆ ಇದೆ.

1.	ಬೆಳಗಾಂ	924
2.	ಬಾಗಲಕೋಟೆ	939
3.	ಗುಲ್ಬರ್ಗಾ	937
4.	ಕೊಪ್ಪಳ	938
5.	ಧಾರವಾಡ	944
6.	ಉತ್ತರ ಕನ್ನಡ	956
7.	ಚಿತ್ರದುರ್ಗ	946
8.	ಬೆಂಗಳೂರು ನಗರ	940
9.	ಬೆಂಗಳೂರು (ಗ್ರಾ)	941
10.	ಮಂಡ್ಯ	937

3. ಗಂಡುಮಕ್ಕಳ ಜನನಕ್ಕೆ ಹೆಚ್ಚು ಆದ್ಯತೆ ನೀಡುತ್ತಿರುವುದು ಹಾಗೂ ಹೆಣ್ಣು ಭ್ರೂಣಹತ್ಯೆ ಹೆಣ್ಣುಮಕ್ಕಳ ಸಂಖ್ಯಾ ಕ್ಷೀಣತೆಗೆ ಕಾರಣವೆಂದು ಊಹಿಸಲಾಗಿದೆ.

ಆದರೆ, ಈ ಬಗ್ಗೆ ಯಾವುದೇ ಸಮೀಕ್ಷೆ ಆಗಿರುವುದಿಲ್ಲ. ಆದಾಗ್ಯೂ ಇದನ್ನು ತಡೆ ಗಟ್ಟಲು PNDT ಕಾಯ್ದೆಯನ್ನು ಜಾರಿಗೊಳಿಸಲಾಗಿದೆ ಹಾಗೂ ಸ್ವಯಂಸೇವಾ ಸಂಸ್ಥೆಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

558(715) ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕು ಕೇಂದ್ರದಲ್ಲಿ ಎ.ಪಿ.ಎಂ.ಸಿ. ಗೋದಾಮನ್ನು ಇದುವರೆಗೂ ನಿರ್ಮಿಸದಿರಲು ಕಾರಣಗಳೇನು;

ಆ) ಗೋದಾಮು ನಿರ್ಮಾಣಕ್ಕೆ ಮನವಿಗಳೇನಾದರೂ ಸಂಬಂಧಪಟ್ಟವರು ಪಡೆದಿದ್ದಾರೆಯೇ;

ಇ) ಹಾಗಿದ್ದಲ್ಲಿ ಆ ಮನವಿಯ ಮೇಲೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಕೃಷಿ ಸಚಿವರು)

ಅ) ತುರುವೇಕೆರೆ ಮಾರುಕಟ್ಟೆ ಪ್ರಾಂಗಣದಲ್ಲಿ 24 ಗೋದಮುಗಳನ್ನು ನಿರ್ಮಿಸಿದ್ದು, ಅವುಗಳಲ್ಲಿ 22 ಗೋದಾಮುಗಳನ್ನು ಪೇಟೆ ಕಾರ್ಯಕರ್ತರಿಗೆ ಹಂಚಿಕೆ ಮಾಡಲಾಗಿದೆ. ಒಂದು ಗೋದಾಮು ಮಾರುಕಟ್ಟೆ ಸಮಿತಿಯ ವಶದಲ್ಲಿದ್ದು ಉಳಿದ ಇನ್ನೊಂದು ಗೋದಾಮು ಕರ್ನಾಟಕ ಆಹಾರ ನಾಗರೀಕ ಸರಬರಾಜು ಇಲಾಖೆ, ತುಮಕೂರು ಇವರಿಗೆ ಲೀವ್ ಅಂಡ್ ಲೈಸೆನ್ಸ್ ಆಧಾರದ ಮೇಲೆ ನೀಡಲಾಗಿದೆ..

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

559(718) ಶ್ರೀ ಕುಮಾರಸ್ವಾಮಿ ಹೆಚ್.ಕೆ. (ಬೇಲೂರು) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ತ್ರೀಶಕ್ತಿ ಸ್ವಸಹಾಯ ಸಂಘಗಳಿಗೆ ಸರ್ಕಾರ ಸುತ್ತುನಿಧಿ ಸವಲತ್ತು ನೀಡುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ ನವ ಸಾಕ್ಷರತ ಸ್ವಸಹಾಯ ಸ್ತ್ರೀ ಸಂಘಗಳಿಗೆ ಈ ಸೌಲಭ್ಯವನ್ನು ಸರ್ಕಾರ ನೀಡುವುದೇ;

ಇ) ಸ್ತ್ರೀ ಸ್ವ ಸಹಾಯ ಸಂಘಗಳ ಚಟುವಟಿಕೆಗಳನ್ನು ನಡೆಸಲು ಸಂಘದ ಮನೆ ನಿರ್ಮಾಣ ಮಾಡುವ ಇರಾದೆ ಸರ್ಕಾರಕ್ಕೆ ಇದೆಯೇ?

ಶ್ರೀಮತಿ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ರಚಿಸಲಾಗಿರುವ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳಿಗೆ ತಲಾ ರೂ. 5.000 ರೂ. ಮತ್ತು ಸಿಡಿಯನ್ನು ಸರ್ಕಾರದಿಂದ ನೀಡಲಾಗುತ್ತಿದೆ.